ಸ್ವಪ್ನ ಸಾಕಾರ

# ಸೆಲ್ಫ್ ಹೀಲಿಂಗ್! ಏನಿದು?

ಗಾಯವೋ ಹಾಳಾದ ವಸ್ತುವಿನ ಭಾಗವೋ ತಂತಾನೇ ಸರಿಯಾಗುವಂತಿದ್ದರೆ? ಈ 'ಸ್ವಯಂ ಗುಣ' ಆಗುವಿಕೆ ಈಗ ಕಲ್ಪನೆಯಾಗಿ ಉಳಿದಿಲ್ಲ. 'ಸೆಲ್ಫ್ ಹೀಲಿಂಗ್' ಪರಿಕಲ್ಪನೆ ಪೂರ್ಣ ಪ್ರಮಾಣದಲ್ಲಿ ಸಾಕಾರಗೊಂಡರೆ – ಭೂಮಿ, ನದಿಗಳ ಮಾಲಿನ್ಯವೂ ತಗ್ಗಬಹುದು, ರಸ್ತೆಗಳ ಗುಂಡಿಗಳೂ ತಂತಾವೇ ಸಪಾಟಾಗಬಹುದು.

■ **ಕರುಣಾ ಬಿ.ಎಸ್.**



ಎಲ್ಲೋ ಚಿತ್ತವಿದ್ದು ಗಮನಹರಿಸದೇ ತರಕಾರಿಯನ್ನು ಹೆಚ್ಚುತ್ತಾ ಬೆರಳ ತುದಿಯಲ್ಲಿ ರಕ್ತ ಚಿಮ್ಮಿದಾಗಲೇ, ನಮ್ಮ ಪ್ರಪಂಚಕ್ಕೆ ನಾವು ಮತ್ತೆ ಮರಳುವುದು. ಗಾಯವೇನೋ ಆಯಿತು ಸರಿ, ಅದಕ್ಕೊಂದಿಷ್ಟು ಅರಿಶಿನವನ್ನು ಮೆತ್ತಿ, ಬ್ಯಾಂಡ್‌ಏಡ್ ತೊಡಿಸಿ, ಒಂದೆರಡು ದಿನ ಬಿಟ್ಟು ನೋಡಲು, ಅದಾಗಲೇ ಮಾಯತೊಡಗಿರುತ್ತದೆ. ತಿಂಗಳು ಬಿಟ್ಟು ನೋಡಿದರೆ, ನಮಗೆ ಗಾಯವಾಗಿತ್ತೇ ಎಂಬ ಪ್ರಶ್ನೆ ಮೂಡಿದರೂ ಆಶ್ಚರ್ಯವಿಲ್ಲ! ಏಕೆಂದರೆ ನಮ್ಮ ದೇಹದ ಜೀವಕೋಶಗಳಿಗೆ ಸ್ವಂತವಾಗಿ ಗುಣಪಡಿಸಿಕೊಳ್ಳುವ ಶಕ್ತಿಯಿದೆ. ಆದರೆ ಇದೇ ಮಾತನ್ನು ನಿರ್ಜೀವ ವಸ್ತುಗಳನ್ನು ಕುರಿತು ಹೇಳಲಾಗುವುದಿಲ್ಲ.

ಕೆಲವೊಮ್ಮೆ ಮೆಚ್ಚಿನ ಉಡುಪು ಹರಿದಾಗ ಅಥವಾ ಅದರಲ್ಲಿ ಚಿಕ್ಕ ತೂತಾದಾಗ, 'ಅಯ್ಯೋ! ಈ ಬಟ್ಟೆ ಹೇಗೋ ಮೊದಲಿನಂತಾಗುವುದಿದ್ದರೆ' ಎಂತಲೋ, ಹಾಗೆಯೇ ವಾಹನ ಪಂಕ್ಚರ್ ಆಗಲು, 'ಓ... ಆ ಟೈರ್ ಏನೇ ಚುಚ್ಚಿದರೂ ತೂತಾಗದೇ ಇರುವಂತಿದ್ದರೆ..., ತೂತಾದ ಭಾಗವು ತಂತಾನೆ ಕೂಡಿಕೊಳ್ಳುವಂತಿದ್ದರೆ...' ಎಂದೆಲ್ಲಾ ಅನಿಸುವುದುಂಟು. ಈಗ ಆ ಆಶಯಗಳು ನಿಜವಾಗುವ ಹಾದಿಯಲ್ಲಿವೆ. ಏಕೆಂದರೆ ಆ ಸಮಸ್ಯೆಗಳನ್ನು ಬಗೆಹರಿಸಲು ಅನುವಾಗುವಂತೆ, ಒಂದು ದಶಕದಿಂದಲೂ ಮಿಗಿಲಾಗಿ 'ಸ್ವಯಂ ಗುಣ' (Self Healing) ಎಂಬ ತಂತ್ರಜ್ಞಾನವನ್ನು ವಿಜ್ಞಾನಿಗಳು ಅಭಿವೃದ್ಧಿಪಡಿಸುತ್ತಿದ್ದಾರೆ.